ಕನ್ನಡಪ್ರಭ
ಮಂಗಳವಾರ 5.05.2026

ಸುದ್ದಿ ಸಿಂಚನ

ಜಿಟಿಟಿಸಿ ಪ್ರವೇಶಕ್ಕೆ ಅರ್ಜಿ

ಲಿಂಗಸುಗೂರು: ಇಲ್ಲಿನ ಕರಡಕಲ್ ರಸ್ತೆಯ ಬಳಿ ಸ್ಥಾಪಿತವಾಗಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, (ಜಿಟಿಟಿಸಿ)ದ ವತಿಯಿಂದ 2026-27ನೇ ಸಾಲಿನಲ್ಲಿ ವಿವಿಧ ಕೋರ್ಸ್‌ಗಳ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿದ್ದು, ಈ ಭಾಗದಲ್ಲಿನ ಪ್ರತಿಷ್ಠಿತ ತಾಂತ್ರಿಕ ವಿದ್ಯಾಸಂಸ್ಥೆಗಳಲ್ಲಿ ಒಂದಾಗಿದೆ. ನಮ್ಮ ಸಂಸ್ಥೆಯಿಂದ ನಡೆಸಲ್ಪಡುವ ಡಿಪ್ಲೊಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್, ಡಿಪ್ಲೊಮಾ ಇನ್ ಆಟೊಮೇಷನ್ ಅಂಡ್ ರೊಬೊಟಿಕ್ಸ್, ಡಿಪ್ಲೊಮಾ ಇನ್ ಪ್ರಿಸಿಶನ್ ಮ್ಯಾನುಫ್ಯಾಕ್ಚರಿಂಗ್ 3+1ವರ್ಷದ ಕೋರ್ಸ್‌ಗಳ ಪ್ರವೇಶಾತಿಗಾಗಿ ಮೇ.15ರೊಳಗಾಗಿ ಜಿಟಿಟಿಸಿ ವೆಬ್ಸೈಟ್: https://gttc.karnataka.gov.in ನಲ್ಲಿ ಅಥವಾ ನೇರವಾಗಿ ಸಂಸ್ಥೆಗೆ ಅಗತ್ಯ ದಾಖಲಾತಿಗಳೊಂದಿಗೆ ಭೇಟಿ ನೀಡಿ ಅರ್ಜಿ ಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9902072101, 8762564872ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆ ಯಲ್ಲಿ ತಿಳಿಸಿದ್ದಾರೆ.

ಕಸಾಪ ಸಂಸ್ಥಾಪನಾ ದಿನಾಚರಣೆ ಇಂದು

ಸಿಂಧನೂರು: ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದಿಂದ ಮಂಗಳವಾರ ಬೆಳಗ್ಗೆ 10 ಗಂಟೆಗೆ ನಗರದ ಸನ್‌ರೈಸ್ ಕಾಲೇಜಿನಲ್ಲಿ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ, ಕನ್ನಡ ಪ್ರೌಢ ಶಾಲೆಯ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ.ಇಲ್ಲಿನ ಎಪಿಎಂಸಿ ಮಾಜಿ ರಾಜ್ಯ ಉಪಾಧ್ಯಕ್ಷ ರಾಜಶೇಖರ ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ನಿವೃತ್ತ ಪ್ರಾಚಾರ್ಯ ವೀರನಗೌಡ ಗುಮಗೇರಾ ಉಪನ್ಯಾಸ ನೀಡಲಿದ್ದಾರೆ. ಕಸಾಪ ಮಾಜಿ ಜಿಲ್ಲಾಧ್ಯಕ್ಷ ಎಸ್.ಶರಣೇಗೌಡ, ಸನ್ ರೈಸ್ ಸಮೂಹ ಸಂಸ್ಥೆಯ ಅಧ್ಯಕ್ಷ ಇರ್ಫಾನ್ ಕೆ., ಕಸಾಪ ಮಾಜಿ ತಾಲ್ಲೂಕು ಅಧ್ಯಕ್ಷರಾದ ಬೀರಪ್ಪ ಶಂಭೋಜಿ, ವೆಂಕನಗೌಡ ವಟಗಲ್, ಜಿಲ್ಲಾ ಪ್ರತಿನಿಧಿ ರಮಾದೇವಿ ಶಂಭೋಜಿ, ಮಾಜಿ ಅಧ್ಯಕ್ಷರಾದ ಸರಸ್ವತಿ ಪಾಟೀಲ್, ಪಂಪಯ್ಯಸ್ವಾಮಿ ಸಾಲಿಮಠ, ವನಸಿರಿ ಫೌಂಡೇಷನ್ ನ ಅಮರೇಗೌಡ ಮಲ್ಲಾಪುರ, ಕಾಂಗ್ರೆಸ್ ಮುಖಂಡ ಸೈಯದ್ ಹಾರೂನ್ ಪಾಷಾ ಜಾಹಗೀರ್‌ದಾರ್, ಲಕ್ಷ್ಮೀ ಪತ್ತಾರ್ ಭಾಗವಹಿಸಲಿದ್ದಾರೆ ಎಂದು ಕಸಾಪ ತಾಲೂಕು ಘಟಕದ ಅಧ್ಯಕ್ಷ ಹೆಚ್.ಎಫ್.ಮಸ್ಕಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕವಿತಾಳದಲ್ಲಿ ವಿಜಯೋತ್ಸವ

ಕವಿತಾಳ : ಮೊದಲ ಬಾರಿಗೆ ಪಶ್ಚಿಮ ಬಂಗಾಳದಲ್ಲಿ ಮತದಾರರು ಕಮಲಕ್ಕೆ ಭರ್ಜರಿ ಮತ ನೀಡಿ ಜಯಭೇರಿ ಬಾರಿಸಿದ್ದಲ್ಲದೆ ಅಸ್ಸಾಂ, ಪುದುಚೇರಿಗಳಲ್ಲೂ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿದ ಹಿನ್ನೆಲೆಯಲ್ಲಿ ಕವಿತಾಳ ಪಟ್ಟಣದ ಬಿಜೆಪಿ ಕಾರ್ಯಕರ್ತರು ಇಲ್ಲಿನ ಗ್ರಾಮ ದೇವತೆ ದ್ಯಾವಮ್ಮ ದೇವಿ ದೇವಸ್ಥಾನದ ಮುಂಭಾಗದಲ್ಲಿ ಪಟಾಕಿ ಸಿಡಿಸಿ ಸಂಭ್ರಮದ ವಿಜಯೋತ್ಸವ ಆಚರಿಸಿದರು. ಈ ವೇಳೆ ಮೋದಿ, ಅಮಿತ್ ಶಾ ಪರ ಘೋಷಣೆ ಕೂಗಿದರು ಪಟಾಕಿ ಸಿಡಿಸಿ ಪರಸ್ಪರ ಸಿಹಿತಿಂಡಿ ಅಂಚಿ ಸಂಭ್ರಮಿಸಿದರು. ಪಪಂ ಸದಸ್ಯ ರಾಘವೇಂದ್ರ ಶೆಟ್ಟಿ ಮಾತನಾಡಿ, ಪಶ್ಚಿಮ ಬಂಗಾಳದಲ್ಲಿ ವ್ಯಾಪಕ ಹಿಂದುತ್ವ ವಿರೋಧಿ ಆಡಳಿತ ವೈಖರಿಯಿಂದ ಬೇಸತ್ತ ಜನತೆ ಬಿಜೆಪಿ ಕೈಹಿಡಿದಿದ್ದಾರೆ ಈ ಮೂಲಕ ಹಿಂದುತ್ವದ ವಿರುದ್ಧ ಹೋಗುವವರಿಗೆ ಮತದಾರರು ಸ್ಪಷ್ಟವಾದ ಸಂದೇಶವನ್ನು ನೀಡಿದ್ದಾರೆ ಈ ಐತಿಹಾಸಿಕವಾದ ಜಯವನ್ನು ಗಳಿಸಿರುವುದರಿಂದ ಸಂಭ್ರಮ ಆಚರಿಸುತ್ತಿದ್ದೇವೆ ಎಂದರು. ಈ ಸಂದರ್ಭದಲ್ಲಿ ಕಾರ್ಯಕರ್ತರಾದ ಎಚ್ ಬಸವರಾಜ, ಅರುಣಕುಮಾರ, ನೀಲಕಂಠ, ಶಿವರಾಜ ಪಾಟೀಲ್ ಡೋಣಮರಡಿ, ಸತ್ಯಪ್ಪ, ಮೋನೇಶ್ ಪತ್ತಾರ್, ಶಂಕರ್, ಮಂಜುನಾಥ್ ಪತ್ತಾರ್, ವಿರೂಪಾಕ್ಷಪ್ಪ ಸಾಹುಕಾರ್, ಶೈಲೇಶ್ ದಾದ, ಮುಂತಾದವರು ಉಪಸ್ಥಿತರಿದ್ದರು.



ಕವಿತಾಳ ಇಲ್ಲಿನ ಗ್ರಾಮದೇವತೆ ದ್ಯಾವಮ್ಮದೇವಿ ದೇವಸ್ಥಾನದ ಮುಂಭಾಗದಲ್ಲಿ ಪಟಾಕಿ ಸಿಡಿಸಿ ಸಂಭ್ರಮದ ವಿಜಯೋತ್ಸವ ಆಚರಿಸಿದರು.

ಸುಸ್ಥಿರ ಘನತ್ಯಾಜ್ಯ ನಿರ್ವಹಣೆಗೆ ಮಾಸ್ಟರ್ ಪ್ಲಾನ್

ರಾಯಚೂರು ಪಾಲಿಕೆಯಿಂದ ಅಂತಾರಾಷ್ಟ್ರೀಯ ಗುಣಮಟ್ಟದಲ್ಲಿ ಕಸ ವಿಲೇವಾರಿ ಪ್ರಕ್ರಿಯೆ; ಆರ್‌ಆರ್‌ಆರ್ ಸೆಂಟರ್ ಆರಂಭ

ನಗರದಲ್ಲಿ ಮರು ಬಳಕೆಗೆ ಅವಕಾಶ | ತ್ಯಾಜ್ಯ ಸಂಸ್ಕರಣಾ ಘಟಕದ ಸ್ಥಾಪನೆ, ಭೂಗರ್ಭದಲ್ಲಿ ನಿಷ್ಕ್ರಿಯ ಕಸ ಹೂಳುವ ಪದ್ಧತಿ

• ರಾಮಕೃಷ್ಣ ದಾಸರಿ
ಕನ್ನಡಪ್ರಭ ವಾರ್ತೆ ರಾಯಚೂರು

ಹತ್ತಾರು ದಶಕಗಳಿಂದ ನಗರವನ್ನು ಕಾಡುತ್ತಿರುವ ಘನ-ತ್ಯಾಜ್ಯ ನಿರ್ವಹಣೆ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮಹಾನಗರ ಪಾಲಿಕೆಯು ಮಾಸ್ಟರ್ ಪ್ಲಾನ್ ರೂಪಿಸಿ ಅನುಷ್ಠಾನಕ್ಕೆ ತರುತ್ತಿದೆ.ಅದಕ್ಕಾಗಿಅಂತಾರಾಷ್ಟ್ರೀಯಗುಣಮಟ್ಟದ ಪ್ರಕ್ರಿಯೇ ನಡೆಸಿ ಕಸ ವಿಲೇವಾರಿ ಪ್ರಕ್ರಿಯೇಯನ್ನು ಕೈಗೊಂಡಿದೆ.

ದೇಶದ ದೊಡ್ಡ ನಗರ, ಪಟ್ಟಣಗಳಲ್ಲಿ ಕಸ ಸಂಗ್ರಹ, ವಿಲೇವಾರಿ ಹಾಗೂ ನಿರ್ವಹಣೆ ಮತ್ತು ಮರು ಬಳಕೆಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಹಾಗೂ ಅತ್ಯಂತ ಯಶಸ್ಸು ಕಂಡಿರುವ ಎರಡು ಪ್ರಮುಖ ಪದ್ಧತಿಗಳನ್ನು ರಾಯಚೂರಿನಲ್ಲಿ ಜಾರಿಗೊಳಿಸಿದ್ದು, ಮೊದಲ ಹಂತವಾಗಿ ಆರ್ ಆರ್ ಆರ್ ಸೆಂಟರ್ ನ್ನು ಆರಂಭಿಸುವುದು ಎರಡನೇ ಹಂತವಾಗಿ ತ್ಯಾಜ್ಯ ಸಂಸ್ಕರಣಾ ಘಟಕ (ಎಂ ಆರ್ ಎಫ್) ಸ್ಥಾಪನೆ ಮಾಡುವುದರ ಮುಖಾಂತರ ಘನ-ತ್ಯಾಜ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಪಾಲಿಕೆ ಮುಂದಾಗಿದೆ.

ದೇಶದ ದೊಡ್ಡ ದೊಡ್ಡ ನಗರಗಳಲ್ಲಿ ಸುಸ್ಥಿರ ಘನ-ತ್ಯಾಜ್ಯ ನಿರ್ವಹಣೆಯಲ್ಲಿ ಮಹತ್ವದ ಪಾತ್ರ ವನ್ನು ನಿಭಾಯಿಸುತ್ತಿರುವ ಆರ್‌ಆರ್‌ಆರ್(ರೆಡ್ಯೂಸ್,ರೀ-ಯೂಸ್, ರೀ-ಸೈಕಲ್) ಸೆಂಟರ್ ಗಳನ್ನು ರಾಯಚೂರು ನಗರದಲ್ಲಿ ಸ್ಥಾಪನೆ ಮಾಡುಲು ಇಲ್ಲಿನ ಮಹಾನಗರ ಪಾಲಿಕೆಯು ಕ್ರಮ ವಹಿಸಿದೆ. ಇದರಿಂದಾಗಿ ನಿತ್ಯ ಸಂಗ್ರಹಗೊಳ್ಳುತ್ತಿರುವ ಘನ-ತ್ಯಾಜ್ಯದ ಸಂಗ್ರಹದ ಪ್ರಮಾಣ ವನ್ನು ಕಡಿಮೆಗೊಳಿಸುವುದರ ಜೊತೆಗೆ ಅಗತ್ಯವಾದ ವಸ್ತುಗಳನ್ನು ಮರಳಿ ಬಳಕೆ ಮಾಡುವುದು ಹಾಗೂ ಪುನರ್ ಉಪಯೋಗಿಸಿ ಕಸಮುಕ್ತ, ಸ್ವಚ್ಛ-ಸುಂದರ ಹಾಗೂ ಪರಿಸರಸ್ನೇಹಿ ನಗರವನ್ನಾಗಿಸಲು ಯೋಜನೆ ರೂಪಿಸಿದೆ.

ಏನಿದು ಟ್ರಿಪಲ್ ಆರ್? : ಸ್ವಚ್ಛ ಭಾರತ್ ಮಿಷನ್ 2.0 ರಡಿಯಲ್ಲಿ ದೇಶದಾದ್ಯಂತ ದೊಡ್ಡ ನಗರ, ಪಟ್ಟಣಗಳಲ್ಲಿಸುಸ್ಥಿರ ಘನ-ತ್ಯಾಜ್ಯ ನಿರ್ವಹಣೆಗಾಗಿ ಟ್ರಿಪ್ ಆರ್ ಸೆಂಟರ್ ಗಳನ್ನು ಆರಂಭಿಸಿ. ಆ ಕೇಂದ್ರಗಳಲ್ಲಿ ವೈಜ್ಞಾನಿಕ ಪದ್ಧತಿಯಡಿ ದೊಡ್ಡ ಡಬ್ಬಿಗಳ ನ್ನಿಟ್ಟಿರುತ್ತಾರೆ. ಅದರಲ್ಲಿ ಈಗಾಗಲೇ ಬಳಸಿದ ವಸ್ತುಗಳು, ಹಳೆಯ ಬಟ್ಟೆ, ಬೂಟುಗಳು, ಆಟಿಕೆ, ಪುಸ್ತಕಗಳು ಮತ್ತು ಕಾಟನ್ ಡಬ್ಬಿಗಳು, ಪ್ಲಾಸ್ಟಿಕ್ ಸೇರಿದಂತೆ ಅನಗತ್ಯವಾದ ಸಾಮಗ್ರಿಗಳನ್ನು ಜನರೇ ತಮ್ಮ ಸಮೀಪದ ಟ್ರಿಪಲ್ ಆರ್ ಸೆಂಟರ್ ಗಳಿಗೆ ತಂದು ನೀಡಿದ್ದಲ್ಲಿ ಅಗತ್ಯವಿರುವವರು ಬಂದು ಅವುಗಳನ್ನು ಪಡೆದು ಮರು ಬಳಕೆ ಮಾಡಿಕೊಳ್ಳಬಹುದಾಗಿದೆ. ಇದರಿಂದಾಗಿ ಘನ-ತ್ಯಾನ್ಯಸಂಗ್ರಹಪ್ರಮಾಣವುಗಣನೀಯವಾಗಿ ಕಡಿಮೆಯಾಗುವುದರ ಜೊತೆಗೆ ಮಾರಕವಾದ ಪ್ಲಾಸ್ಟಿಕ್, ಕಸ ಭೂಮಿಗೆ ಸೇರದಂತೆ ಪರಿಸರವನ್ನು ಸಹ ಕಾಪಾಡಬಹುದಾಗಿದೆ.



ರಾಯಚೂರು ಮಹಾನಗರ ಪಾಲಿಕೆಯಿಂದ ಆರಂಭಿಸುತ್ತಿರುವ ಆರ್ ಆರ್ ಆರ್ ಸೆಂಟರ್‌ಗಳ ಎಐ ಚಿತ್ರ

ಎಲ್ಲೆಲ್ಲಿ ಸ್ಥಾಪನೆ ?: ಆರ್ ಆರ್ ಆರ್ ಸೆಂಟರ್‌ಗಳನ್ನು ಕಾರ್ಯಾರಂಭ ಮಾಡುವುದರ ಜೊತೆಗೆ ಯಾವ ರೀತಿಯಾಗಿ ಅವು ಗಳನ್ನು ನಿರ್ವಹಿಸಬೇಕು ಎನ್ನುವುದರ ಕುರಿತು ರಾಯಚೂರು ಮಹಾನಗರ ಪಾಲಿಕೆಯು ಆಳವಾದ ಅಧ್ಯಯನ ನಡೆಸಿ ಯೋಜನೆಯನ್ನು ರೂಪಿಸಿ ಕಾರ್ಯಗತಗೊಳಿಸಿದೆ. ಆರಂಭದಲ್ಲಿ ರಾಯಚೂರು ನಗರದ ವಾರ್ಡ್ ನಂ.5 ರ ವ್ಯಾಪ್ತಿಗೆ ಬರುವ ನಿಜಲಿಂಗಪ್ಪ ಕಾಲೋನಿಯಲ್ಲಿ ಅದೇ ರೀತಿ ವಾರ್ಡ್ ನಂ.26 ಗಂಜ್ ಏರಿಯಾದಲ್ಲಿ ಈ ಟ್ರಿಪಲ್ ಆರ್ ಸೆಂಟರ್ ಗಳನ್ನು ಸ್ಥಾಪಿಸಿದೆ. ಮುಂದಿನ ಮೂರು ತಿಂಗಳಲ್ಲಿ ನಗರದ ವ್ಯಾಪ್ತಿಯಲ್ಲಿರುವ ಹತ್ತು ಪ್ಯಾಕೇಜ್‌ಗಳಲ್ಲಿ ಪ್ರತಿ ಮೂರು ವಾರ್ಡ್ ಗಳಿಗೆ ಒಂದರಂತೆ ಈ ಆರ್ ಆರ್ ಆರ್ ಕೇಂದ್ರಗಳನ್ನು ಆರಂಭಿಸಲು ನೀಲನಕ್ಷೆಯನ್ನು ರೂಪಿಸಿಕೊಂಡಿದೆ. ತ್ಯಾಜ್ಯವನ್ನು ಸಂಗ್ರಹಿಸಲು ಹಸಿರು ದಳ ಎನ್ನುವ ಸಂಸ್ಥೆಯಿಂದ ಸರ್ವೇ ಮಾಡಿಸಿದ್ದು ಅದಕ್ಕಾಗಿ ಸುಮಾರು 80 ಜನ ಚಿಂದಿ ಆಯುವವರನ್ನು ಗುರುತಿಸಲಾಗಿದೆ. ಇವರುಗಳು ತ್ಯಾಜ್ಯವನ್ನು ಉಚಿತವಾಗಿ ತೆಗೆದುಕೊಂಡು ಹೋಗಲು ಅನುಕೂಲ ಮಾಡಿಕೊಟ್ಟಿದ್ದು, ಇದರಿಂದ ಯಕ್ಲಾಸಪುರದಲ್ಲಿರುವ ಘನ-ತ್ಯಾಜ್ಯ ಸಂಗ್ರಹ ಘಟಕಕ್ಕೆ ಕಸ ಬಾರದಂತೆ ನಿಯಂತ್ರಿಸಬಹುದಾಗಿದೆ.

ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆ: ಇನ್ನು ಯಕ್ಲಾಸಪುರ ಡಪ್ ಯಾರ್ಡ್ ನಲ್ಲಿ ತ್ಯಾಜ್ಯ ಸಂಸ್ಕರಣಾ ಘಟಕವನ್ನು (ಮೆಟೀರಿಯಲ್ಸ್ ರಿಕವರಿ ಫೆಸಿಲಿಟಿ-ಎಂ.ಆರ್. ಎಫ್) ಸ್ಥಾಪಿಸಲಾಗುತ್ತಿದೆ. ಕಳೆದ ಮೂರು ತಿಂಗಳ ಹಿಂದೆಯೇ ಸುಮಾರು 5.40 ಕೋಟಿ ರು. ವೆಚ್ಚದಲ್ಲಿ ಟೆಂಡರ್ ಮಾಡಿ,ಕೆಲಸವನ್ನು ಆರಂಭಿಸಿದ್ದು ಮುಂದಿನ ಮೂರ್ನಾಲ್ಕು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಂಡು ಘಟಕ ಆರಂಭಗೊಳ್ಳಲಿದೆ. ಇದರ ಜೊತೆಗೆ ಬೆಳಗಾವಿ ಕಂಪನಿಗೆ ಸುಮಾರು 2.5 ಕೋಟಿ ರು.ವೆಚ್ಚದಲ್ಲಿ ಟೆಂಡರ್ ನೀಡಿದ್ದು, ಎರಡು ತಿಂಗಳಲ್ಲಿ ಯಂತ್ರಗಳನ್ನು ಅಳವಡಿಸಲಾಗುತ್ತಿದೆ. ಮುಖ್ಯವಾಗಿ ಸಪ್ಲೇಯರ್ ಇರುತ್ತದೆ, ಸಂಗ್ರಹಿಸಿದ ಕಸವನ್ನು ಸಾಲಾಗಿ ಚಲಿಸುವ ಉದ್ದನೆಯ ಯಾಂತ್ರಿಕ ಪಟ್ಟಿಗಳ (ಕನ್ವೇಯರ್ ಬೆಲ್ಟ್) ಮುಖಾಂತರ ವಿಂಗಡಿಸಿ, ಎರಡೂ ಬದಿಯಲ್ಲಿ ಚಿಂದಿ ಆಯುವವರ ನೆರವಿನಿಂದ ಅಗತ್ಯವಾದ ಪ್ಲಾಸ್ಟಿಕ್, ಕಾಗದ ಮತ್ತು ಲೋಹಗಳನ್ನು ಪ್ರತ್ಯೇಕಿಸು ವುದು, ನಂತರ ಸಂಕೋಚನ ಪ್ರಕ್ರಿಯೆಯಲ್ಲಿ ಪ್ರತ್ಯೇಕಿಸಿದ ನೈರ್ಮಲ್ಯವನ್ನು ದೊಡ್ಡ ಕಟ್ಟುಗಳಾಗಿ ಪರಿವರ್ತಿಸಿ ಮರುಬಳಕೆಗೆ ಕಳುಹಿಸಿಕೊಡುವ ಕಾರ್ಯವನ್ನು ಈ ಎಂಆರ್‌ಎಫ್ ಕೇಂದ್ರವು ಮಾಡುತ್ತದೆ.

ಇದರಿಂದಾಗಿ ಶೇ.80 ರಷ್ಟು ಘನ-ತ್ಯಾಜ್ಯವನ್ನು ಮರು ಬಳಕೆ ಮಾಡಬಹುದಾಗಿದೆ. ಇನ್ನು ಉಳಿದಂತಹ ಹಸಿ ಕಸವನ್ನು ಗೊಬ್ಬರ ಮಾಡಿ ಪುನರ್ ಬಳಸಲಿದ್ದು, ನಿಷ್ಕ್ರಿಯ ಕಸವನ್ನು ನಿರ್ಮಾಣ ಮಾಡಿದ ಭೂ ಗರ್ಭದಲ್ಲಿ (ಸ್ಯಾನಿಟರಿ ಲ್ಯಾಂಡ್ ಫೀಲ್ -ಎಸ್‌ಎಲ್‌ಎಫ್ ಪ್ರಕ್ರಿಯೇ) ಹೂತು ಹಾಕಲಾಗುತ್ತಿದೆ. ಅದಕ್ಕಾಗಿ ಯಕ್ಲಾಸಪುರದಲ್ಲಿ ಸುಮಾರು 70 ಲಕ್ಷ ರು. ವೆಚ್ಚದಲ್ಲಿ ಎರಡು ಎಸ್‌ಎಲ್‌ಎಫ್‌ಗಳನ್ನು ಸಹನಿರ್ಮಿಸಲಾಗಿದೆ. ಹೀಗೆ, ಸ್ಥಳೀಯ ಮಹಾನಗರ ಪಾಲಿಕೆಯು ಘನ-ತ್ಯಾಜ್ಯದ ವಿಲೇವಾರಿ, ವಿಂಗಡಣೆ, ಮರುಬಳಕೆ, ಹೆಚ್ಚಿನ ಪ್ರಮಾಣದಲ್ಲಿ ಕಸ ಸಂಗ್ರಹವಾಗದಂತೆ ಮುನ್ನೆಚ್ಚರಿಕೆ ಹಾಗೂ ನೈರ್ಲಮ್ಯದಡಿ ನಿವಾಸಿಗಳ ಆರೋಗ್ಯ, ಪರಿಸರ ಸಂರಕ್ಷಣೆಯ ಸದುದ್ದೇಶವನ್ನು ಹೊಂದಿ ಅಂತರಾಷ್ಟ್ರೀಯ ಗುಣಮಟ್ಟದ ಸುಸ್ಥಿರ ತ್ಯಾಜ್ಯ ನಿರ್ವಹಣೆಗೆ ಮುಂದಾಗಿದ್ದು ಇದಕ್ಕೆ ಜನಪ್ರತಿನಿಧಿಗಳ, ಅಧಿಕಾರಿಗಳ, ಸಂಘ-ಸಂಸ್ಥೆಗಳ ಮುಖ್ಯವಾಗಿ ನಾಗರೀಕರ ಸಹಕಾರವನ್ನು ಪಾಲಿಕೆ ಕೋರುತ್ತಿದೆ.



ಜಿಲ್ಲಾ ಕೇಂದ್ರವಾದ ರಾಯಚೂರು ನಗರದಲ್ಲಿ ಘನ-ತ್ಯಾಜ್ಯ ನಿರ್ವಹಣೆಗಾಗಿ ವೈಜ್ಞಾನಿಕ ಪದ್ಧತಿಯಡಿ ಯಲ್ಲಿ ಹಂತ ಹಂತವಾಗಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರಲಾಗಿದೆ. ಅವುಗಳಲ್ಲಿ ಮುಖ್ಯವಾಗಿ ಆರ್‌ಆರ್‌ಆರ್ ಸೆಂಟರ್‌ಗಳು, ಎಂಆರ್ ಎಫ್ ಹಾಗೂ ಸ್‌ಎಲ್‌ಎಫ್ ನಿರ್ಮಾಣವು ಸೇರಿದ್ದು. ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿವೆ. ಶೀಘ್ರದಲ್ಲಿಯೇ ಅಂತಾ ರಾಷ್ಟ್ರೀಯ ಗುಣಮಟ್ಟದಲ್ಲಿ ಕಸ ವಿಲೇವಾರಿ ಪ್ರಕ್ರಿಯೆಯನ್ನು ಆರಂಭಿಸಲಾಗುವುದು. ಈ ಮಾದರಿ ಯು ಯಶಸ್ವಿಯಾಗಿ ಮುನ್ನಡೆಯಲು ಎಲ್ಲರೂ ಜಾಗೃತಿಗೊಳ್ಳುವುದರ ಜೊತೆಗೆ ಸಹಕಾರವು ಅಗತ್ಯವಾಗಿ ಬೇಕಾಗಿದೆ.

• **ಜುಬಿನ್ ಮೊಹಾಪಾತ್ರ**, ಆಯುಕ್ತರು, ರಾಯಚೂರು ಮಹಾನಗರ ಪಾಲಿಕೆ



ತ್ಯಾಜ್ಯ ಸಂಸ್ಕರಣಾ ಘಟಕ (ಮೆಟೀರಿಯಲ್ಸ್ ರಿಕವರಿ ಫೆಸಿಲಿಟಿ-ಎಂ.ಆರ್.ಎಫ್)ದ ಎಐ ಚಿತ್ರ

ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳಿಂದ ರಾಜ್ಯ ದಿವಾಳಿ

ರಸ್ತೆ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಶಾಸಕ ಮಾನಪ್ಪ ವಜ್ಜಲ್ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ

• **ಕನ್ನಡಪ್ರಭ ವಾರ್ತೆ** ಹಟ್ಟಿಚಿನ್ನದಗಣಿ

ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ₹1 ಲಕ್ಷ ಸಾಲ ಬೀಳುತ್ತದೆ. ನಾವು ಉಚಿತ ಯೋಜನೆಗಳನ್ನು ಪಡೆದು ನಮ್ಮ ಮಕ್ಕಳು ಮೊಮ್ಮಕ್ಕಳು ಸಾಲ ತೀರಿಸುವಂತೆ ಆಗುತ್ತದೆ. ಇತ್ತ ರಾಜ್ಯದ ಖಜಾನೆ ಬರಿದಾಗಿ ರಾಜ್ಯ ದಿವಾಳಿಯಾಗಿದೆ ಎಂದು ಶಾಸಕ ಮಾನಪ್ಪ ಡಿ. ವಜ್ಜಲ್ ವಾಗ್ದಾಳಿ ನಡೆಸಿದರು.

ಅವರು ಸಮೀಪದ ಬಂಡೇಬಾವಿ, ಮಾಚನೂರು ಹಾಗೂ ಯಲಗಟ್ಟಾ ಗ್ರಾಮದಲ್ಲಿ ರಸ್ತೆ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ಅಭಿವೃದ್ಧಿ ಕಾಮಗಾರಿಗಳಿಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಬಿಜೆಪಿ ಶಾಸಕರಿಗೆ ಅನುದಾನ ನೀಡುತ್ತಿಲ್ಲ. ಪ್ರತಿಯೊಂದು ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಪಡೆಯಲು ಸಿಎಂ, ಡಿಸಿಎಂ ಹಾಗೂ ಸಚಿವರ ಬಳಿ ಭಿಕ್ಷೆ ಬೇಡಿದರೂ ಕೂಡಾ ತಾತ್ಸಾರದಿಂದ ವರ್ತಿಸುತ್ತಿದೆ. ಕ್ಷೇತ್ರದಲ್ಲಿ ಅಭಿವೃದ್ಧಿ ಮರಿಚಿಕೆಯಾಗಿದೆ. ಸಾಲದ ಮೊತ್ತ ಏರಿಸಿರುವುದೇ ರಾಜ್ಯ ಸರ್ಕಾರದ ಸಾಧನೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.



ಹಟ್ಟಿಯಿಂದ ಬಂಡೇಬಾವಿ ಗ್ರಾಮದ ರಸ್ತೆಕಾಮಗಾರಿಗೆ ಶಾಸಕ ಮಾನಪ್ಪ ಡಿ.ವಜ್ಜಲ್ ಭೂಮಿ ಪೂಜೆ ಸಲ್ಲಿಸಿದರು.

ಯಲಗಟ್ಟಾದಿಮದ ಪೈದೊಡ್ಡಿ, ಗುರುಗುಂಟಾದಿಂದ ಗೌಡೂರು ರಸ್ತೆ, ಹಟ್ಟಿಯಿಂದ ಬಂಡೇಬಾವಿ ಗ್ರಾಮದ ವರೆಗೆ ಮುಖ್ಯಮಂತ್ರಿ ಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ₹12.50 ಕೋಟಿ ವೆಚ್ಚದಲ್ಲಿ ರಸ್ತೆ ನಿರ್ಮಾಣ ಮಾಡಲು ಭೂಮಿ ಪೂಜೆ ನೆರವೇರಿಸಲಾಗಿದ್ದು, ಶೀಘ್ರದಲ್ಲಿಯೇ ಕಾಮಗಾರಿ ಮುಗಿಸಲು ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದರು. ಬಿಜೆಪಿ ಪ್ರಮುಖರಾದ ಗಿರಿಮಲ್ಲನಗೌಡ ಪಾಟೀಲ್ ಕರಡಕಲ್ ಮಾತನಾಡಿದರು. ಲೋಕೋಪಯೋಗಿ ಇಲಾಖೆ ಜೆಇ ಯಲಗೂರೇಶ್, ಹಸನ್ದೋಸ್ತ್, ಆರ್. ವೆಂಕಟೇಶ್ ಇದ್ದರು.

ಶಾಸಕ ಹಂಪನಗೌಡ ಬಾದರ್ಲಿಗೆ ಸಚಿವ ಸ್ಥಾನ ನೀಡಲು ಒತ್ತಾಯ

ಮಾದಿಗ ಕ್ಷೇಮಾಭಿವೃದ್ಧಿ ಸಂಘದಿಂದ ಸಿಎಂಗೆ ಮನವಿಗೆ ಚಿಂತನೆ



• **ಕನ್ನಡಪ್ರಭ ವಾರ್ತೆ** ಸಿಂಧನೂರು

ಸ್ಥಳೀಯ ಕ್ಷೇತ್ರದ ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ಹಿರಿತನದ ಆಧಾರದ ಮೇಲೆ ರಾಜ್ಯ ಸರ್ಕಾರ ಸಚಿವ ಸಂಪುಟ ದರ್ಜೆಯ ಸ್ಥಾನ ನೀಡಬೇಕು ಎಂದು ಮಾದಿಗ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮರಿಯಪ್ಪ ಜಾಲಿಹಾಳ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಐದು ಬಾರಿ ಶಾಸಕರಾಗಿರುವ ಹಂಪನಗೌಡ ಬಾದರ್ಲಿ, ರಾಯಚೂರು ಜಿಲ್ಲೆಯ ಹಿರಿಯ ಶಾಸಕರಾಗಿದ್ದು, ಇವರಿಗೆ ಸಚಿವ ಸಂಪುಟ ಪುನರ್‌ರಚನೆಯ ಸಂದರ್ಭದಲ್ಲಿ ಸಚಿವ ಸ್ಥಾನ ನೀಡಬೇಕು. ಮಾದಿಗ ಸಮುದಾಯದ ಹಿರಿಯ ಮುಖಂಡರ ನಿಯೋಗ ಬೆಂಗಳೂರಿಗೆ ತೆರಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನ ಸೆಳೆದು ಒತ್ತಾಯಿಸಲಾಗುವುದು ಎಂದು ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್‌ಸೇವಾ ಸಮಿತಿ ಅಧ್ಯಕ್ಷ ಯಮನಪ್ಪ ಬಿಎಸ್‌ಎನ್ ಎಲ್ ಮಾತನಾಡಿ, ಹಂಪನಗೌಡ ಬಾದರ್ಲಿ ಅವರು 1978ರಿಂದ ರಾಜಕೀಯಕ್ಕೆ ಪದಾರ್ಪಣೆ ಮಾಡಿದ್ದಾರೆ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಲೋಕೋಪಯೋಗಿ ಉಪಸಮಿತಿ ಸದಸ್ಯರಾಗಿ, 1989 ರಲ್ಲಿ ಮೊದಲ ಬಾರಿಗೆ ಶಾಸಕರಾಗಿ, ಇಲ್ಲಿಯವರೆಗೆ 5 ಬಾರಿ ಶಾಸಕರಾಗಿ ಸಿಂಧನೂರು ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಿದ್ದಾರೆ. ಹೀಗಾಗಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಮಾದಿಗ ಸಮುದಾಯದ ಮುಖಂಡರಾದ ಆರ್.ಅಂಬ್ರೋಸ್, ಲಕ್ಷ್ಮಣ ಮೂಡಲಗಿರಿ ಕ್ಯಾಂಪ್, ರಾಮಣ್ಣ ಸಾಸಲಮರಿ, ಹನುಮಂತಪ್ಪ ರೈತನಗರ ಕ್ಯಾಂಪ್, ಹುಲುಗಪ್ಪ ಇದ್ದರು.

ಅಂಗನವಾಡಿ ಕಾರ್ಯಕರ್ತೆ, ಸಹಾಯಕಿ ಹುದ್ದೆಗೆ ಅರ್ಜಿ

• **ಕನ್ನಡಪ್ರಭ ವಾರ್ತೆ** ರಾಯಚೂರು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಯಚೂರು ವತಿಯಿಂದ 2022-23, 2023-24, 2024-25 ಮತ್ತು 2025-26ನೇ ಸಾಲಿಗೆ ಅಂಗನವಾಡಿ ಕಂ ಕ್ರಷ್ಗಳನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಪ್ರಾರಂಭಿಸಲು ಸೂಚಿಸಲಾಗಿದೆ. ಜಿಲ್ಲೆಗೆ ಒಟ್ಟು 60 ಕೇಂದ್ರಗಳುಮಂಜೂರಾಗಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಂಗನವಾಡಿ ಕಂ ಕ್ರಷ್ ಕೇಂದ್ರಗಳ ಕಾರ್ಯಕರ್ತೆ ಗೌರವಧನ 5,500 ರು. ಮತ್ತು ಸಹಾಯಕಿ ಗೌರವಧನ 3,000 ರು. ನೀಡಲಾಗುವುದು. ಅಭರ್ಥಿಯು ಸ್ಥಳಿಯ ಅಂಗನವಾಡಿ ಕಂ ಕ್ರಷ್ ಕೇಂದ್ರದ ಸರ್ವೆ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಸಂಬಂಧಪಟ್ಟ ಅಂಗನವಾಡಿ ಕೇಂದ್ರದ ವ್ಯಾಪ್ತಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯಿಂದ ಸರ್ವೆ ವ್ಯಾಪ್ತಿಯಲ್ಲಿರುವ ಬಗ್ಗೆ ದೃಡೀಕರಣ ಪಡೆದು ಸಲ್ಲಿಸಬೇಕು. ಅಭ್ಯರ್ಥಿಯು ಮಹಿಳೆ ಆಗಿರಬೇಕು. ಕರ್ನಾಟಕ ರಾಜ್ಯ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ದ್ವಿತೀಯ ಪಿಯುಸಿಯಲ್ಲಿ ತೇರ್ಗಡೆ ಆಗಿರಬೇಕು. ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರ ಬೇಕು. ಈ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷ ಮಂಡಳಿ ನಡೆಸುವ 10ನೇ ತರಗತಿಯಲ್ಲಿ ತೇರ್ಗಡೆ ಆಗಿರುವವರನ್ನು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರುವವರನ್ನು ಪರಿಗಣಿ ಸಬಹುದಾಗಿದೆ. ವಯೋಮಿತಿ ಅರ್ಜಿ ಸಲ್ಲಿಸಲು ನೇಮಕಾತಿ ಅಧಿಸೂಚನೆ ಹೊರಡೊಸಿದ ದಿನಾಂಕಕ್ಕೆ ಕನಿಷ್ಠ 18 ವರ್ಷ ಪೂರ್ಣಗೊಂಡಿರಬೇಕು. ಮತ್ತುಗರಿಷ್ಠ 35 ವರ್ಷ ಮೀರಿರಬಾರದು. ವಿಧವೆಯರು ಮತ್ತು ಅಂಗವಿಕಲರಿಗೆ 10 ವರ್ಷ ವಯೋಮಿತಿಯಲ್ಲಿ ರಿಯಾಯಿತಿ ಇರುತ್ತದೆ.

ಅಭ್ಯರ್ಥಿಯು 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಅಥವಾ ಕನ್ನಡವನ್ನು ಒಂದು ಭಾಷಾ ವಿಷಯವಾಗಿ ಓದಿರ ಬೇಕು. ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ 6 ತಿಂಗಳಿಂದ 6 ವರ್ಷದ ಮಕ್ಕಳ ಪೋಷಣೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಕನಿಷ್ಠ 6 ತಿಂಗಳಅವಧಿಯವಿಷಯವನ್ನುಅಥವಾತರಬೇತಿಯನ್ನು ಪಡೆದಿರಬೇಕು. ರಾಷ್ಟ್ರೀಯ ಶಿಶುಪಾಲನಾ ಕೇಂದ್ರದಲ್ಲಿ ಸೇವೆ ಸಲ್ಲಿಸಿರುವ ಶಿಕ್ಷಕಿ ಹಾಗೂ ಸಹಾಯಕಿ, ವಿಧವೆಯರು, ವಿಶೇಷಚೇತನರು (ಕನಿಷ್ಠ ಶೇಕಡಾ 40 ಗರಿಷ್ಠ ಶೇಕಡಾ 60 ರಷ್ಟು ವಿಕಲಚೇತನರನ್ನು ಮಾತ್ರ ಪರಿಗಣಿಸತಕ್ಕದ್ದು, ಇಲಾಖಾ ಸಂಸ್ಥೆಯ ನಿವಾಸಿಗಳು ಮೇ 18 ರವರೆಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಿಂಧನೂರು, ತುರ್ವಿಹಾಳ, ಲಿಂಗಸುಗೂರು, ಮಾನ್ವಿ, ದೇವದುರ್ಗ, ಸಿರವಾರ, ಗಿಲ್ಲೇಸುಗೂರು, ಮತ್ತು ರಾಯಚೂರು ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕ ಮಾಡಬಹುದಾಗಿದೆ ಅಥವಾ ಮೊಬೈಲ್ ಸಂಖ್ಯೆ: 7619281523ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಂಪ್ಯೂಟರ್ ಅಂಗಡಿಗಳ ಏಕಾಏಕಿ ತೆರವು ಕೂಡಲೇ ಕೈಬಿಡಲು ಆಗ್ರಹ

ಸಂಘಟನೆಯಿಂದ ಸಹಾಯಕ ಆಯುಕ್ತರಿಗೆ ಮನವಿ



ಲಿಂಗಸುಗೂರಲ್ಲಿ ಕಂಪ್ಯೂಟರ್‌ಅಂಗಡಿಗಳ ತೆರವು ಕೈಬಿಡಲು ಆಗ್ರಹಿಸಿ ಸಹಾಯಕ ಆಯುಕ್ತರ ಕಛೇರಿಯ ಅನುಪಮ ಸಿಂಗ್‌ಗೆ ಮನವಿ ಸಲ್ಲಿಸಿದರು.

• **ಕನ್ನಡಪ್ರಭ ವಾರ್ತೆ** ಲಿಂಗಸುಗೂರು

ಪುರಸಭೆ ವ್ಯಾಪ್ತಿಯಲ್ಲಿ ಪ್ರವಾಸಿ ಮಂದಿರ ಸುತ್ತಮುತಲ ರಸ್ತೆಗಳ ಪಕ್ಕದಲ್ಲಿ ವಿದ್ಯಾವಂತ ನಿರುದ್ಯೋಗಿಗಳು ಕಂಪ್ಯೂಟರ್‌ಅಂಗಡಿಗಳಿಂದ ಜೀವನಸಾಗಿಸುತ್ತಿದ್ದು, ಏಕಾಏಕಿಯಾಗಿ ಅಂಗಡಿಗಳನ್ನು ತೆರವುಗೊಳಿಸಲು ಪುರಸಭೆ ಮುಂದಾಗಿದ್ದು ಕೂಡಲೇ ತೆರವು ಕಾರ್ಯಚರಣೆ ದಯವಿಟ್ಟು ಕೈ ಬಿಡಬೇಕೆಂದು ಆಗ್ರಹಿಸಿ ಕಂಪ್ಯೂಟರ್‌ಅಂಗಡಿಗಳ ಸಂಘಟನೆಯಿಂದ ಸೋಮವಾರ ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಕಳೆದ 20 ರ್ಷಗಳಿಂದ ವಿದ್ಯಾವಂತ ನಿರುದ್ಯೋಗಿ ಯುವಕರು ಕಂಪ್ಯೂಟರ ಅಂಗಡಿಗಳನ್ನು ಇಟ್ಟು ಸರ್ಕಾರದ ಯೋಜನೆಗಳ ಬಗ್ಗೆ ಜನರಿಗೆ ಮಾಹಿತಿ ನೀಡುತ್ತಾ ಸೌಲತ್ತುಗಳನ್ನು ಕೊಡಿಸುತ್ತಾ ವ್ಯಾಪಾರ ಮಾಡಿ ಉಪಜೀವಿಸುತ್ತಿದ್ದೇವೆ. ನೂರಾರು ಬಡ ಕುಟುಂಬಗಳು ಕಂಪ್ಯೂಟರ್‌ಅಂಗಡಿಗಳನ್ನು ಅವಲಂಬಿಸಿ ಬದುಕುತ್ತಿವೆ. ಜೊತೆಗೆ ನಮ್ಮ ಅಂಗಡಿಗಳಿಗೆ ಬ್ಯಾಂಕು, ಖಾಸಗಿ ಲೇವಾದೇವಿ ಸಂಸ್ಥೆಗಳು ಹಣಕಾಸಿನ ನೆರವು ನೀಡಿವೆ ಈಗಾಗಲೆ ಬ್ಯಾಂಕುಗಳಿಂದ ಪಡೆದ ಸಾಲವನ್ನು ಮರುಪಾವತಿ ಮಾಡಲು ಮತ್ತು ಕುಟುಂಬಗಳ ನಿರ್ವಹಣೆ ಕಂಪ್ಯೂಟರ್‌ಅಂಗಡಿಗಳ ಮೂಲಕ ನಡೆಯುತ್ತಿವೆ. ಆದರೆ ಅಂಗಡಿಗಳಿಗೆ ನೀಡಿದ್ದ ವಿದ್ಯುತ್ ಸಂಪರ್ಕ ಕಡಿತ ಮಾಡಿ ಅಂಗಡಿಗಳ ತೆರವು ಮಾಡುವುದಾಗಿ ಪುರಸಭೆ ನೋಟೀಸ್ ನೀಡಿರುವುದು ಕಂಪ್ಯೂಟರ್‌ಅಂಗಡಿ ಗಳನ್ನು ಅವಲಂಬಿಸಿ ಬದುಕುವ ಬಡ ಕುಟುಂಬಗಳಿಗೆ ದಿಕ್ಕು ತೋಚದಂತ್ತಾಗಿದೆ. ಎಂದು ಅಳಲು ತೋಡಿಕೊಂಡರು.ಕೂಡಲೇ ಕಂಪ್ಯೂಟರ್‌ಅಂಗಡಿಗಳನ್ನು ತೆರವುಗೊಳ ಸುವುದನ್ನು ಕೈಬಿಟ್ಟು ಅಂಗಡಿ ಹಾಕಿಕೊಳ್ಳಲು ಪರ್ಯಾಯಾ ವ್ಯವಸ್ಥೆ ಕಲ್ಪಿಸಿ ಬಡ ಕಂಪ್ಯೂಟರ್‌ಅಂಗಡಿಕಾರರ ಹಿತ ಕಾಪಡಬೇಕೆಂದು ಮನವಿ ಮಾಡಿದರು. ಈ ವೇಳೆ ಬಸವರಾಜ್ ಗುಂಟಿ, ಪ್ರತಾಪ್ ಸಿಂಗ್, ವಿಜಯ್ ಸಿಂಗ್, ಕರಡಿ, ನವೀನ್ ಕುಮಾರ್, ಅಜರ್, ನವಾಬ್ ಮನಿಯಾರ್, ರಜಾಕ್,ಬೀದಿ ಬದಿ ವ್ಯಾಪಾರಸ್ಥರು ಇದ್ದರು.

ಅಭೂತಪೂರ್ವ | ಪಕ್ಷದ ಕಾರ್ಯಕರ್ತರಿಂದ ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿ ಸಂಭ್ರಮ, ಜಯಘೋಷ

3 ರಾಜ್ಯದಲ್ಲಿ ಜಯಭೇರಿ: ಬಿಜೆಪಿ ಪಾಳಯದಲ್ಲಿ ಸಂಭ್ರಮ



• **ಕನ್ನಡಪ್ರಭ ವಾರ್ತೆ** ರಾಯಚೂರು

ದೇಶದ ಐದು ರಾಜ್ಯಗಳಲ್ಲಿ ನಡೆದ ವಿಧಾನ ಸಭಾ ಚುನಾವಣೆಗಳ ಫಲಿತಾಂಶದಲ್ಲಿ 3 ರಾಜ್ಯದಲ್ಲಿ ಬಿಜೆಪಿ ಗೆಲುವು ಸಾಧಿಸಿದ ಹಿನ್ನೆಲೆ ಯಲ್ಲಿ ಬಿಜೆಪಿ ಜಿಲ್ಲಾ ಸಮಿತಿಯಿಂದ ಸೋಮವಾರ ಸಂಜೆ ಸಂಭ್ರಮಆಚರಿಸಲಾಯಿತು.

ಸ್ಥಳೀಯ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಸೇರಿದ ಪಕ್ಷದ ಕಾರ್ಯಕರ್ತರು ಪಟಾಕಿ ಸಿಡಿಸಿ, ಪರಸ್ಪರ ಸಿಹಿಯನ್ನು ಹಂಚಿಕೊಂಡು ಜಯಕಾರ ಹಾಕಿ ವಿಜಯೋತ್ಸವ ಆಚರಿಸಿದರು. ಈ ವೇಳೆ ಮಾತನಾಡಿದ ಮುಖಂಡರು, ಪಶ್ಚಿಮ ಬಂಗಾಳದಲ್ಲಿ ಇದೇ ಮೊದಲಬಾರಿಗೆ ಬಿಜೆಪಿ ಭರ್ಜರಿ ಗೆಲುವು ಸಾಧಿಸಿದೆ. ಅಷ್ಟೇ ಅಲ್ಲದೇ ಅಸ್ಸಾಂ, ಪುದುಚೇರಿಗಳಲ್ಲೂ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿದಿದೆ ದೇಶದ ಬಹುತೇಕ ಎಲ್ಲ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರವನ್ನು ನಡೆಸುತ್ತಿದ್ದು, ಪಶ್ಚಿಮ ಬಂಗಾಳದಲ್ಲಿನ ಮತದಾರರು ಬಿಜೆಪಿ ಸಂಪೂರ್ಣ ಬೆಂಬಲ ನೀಡುವುದರೊಂದಿಗೆ ಐತಿಹಾಸಿಕ ಗೆಲುವನ್ನು ಧಕ್ಕಿಸಿಕೊಟ್ಟಿದ್ದಾರೆ ಎಂದರು. ಈ ಸಂದರ್ಭದಲ್ಲಿ ಪಕ್ಷದ ಹಿರಿಯ-ಕಿರಿಯ ಮುಖಂಡರು, ವಿವಿಧ ಮೋರ್ಚಾಗಳ ಪ್ರಮುಖರು, ಮಹಿಳೆಯರು, ಕಾರ್ಯಕರ್ತರು ಭಾಗವಹಿಸಿದ್ದರು.

ಮುದಗಲ್‌ನಲ್ಲೂ ವಿಜಯೋತ್ಸವ

ಮುದಗಲ್: ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ಚುನಾವಣೆಯಲ್ಲಿ ಭಾರತೀಯ ಜನತಾ ಪಾರ್ಟಿ ಗೆಲುವು ಸಾಧಿಸಿದ ನಿಮಿತ್ತ ವಿಜಯೋತ್ಸವ ಆಚರಿಸಲಾಯಿತು.

ಪಟ್ಟಣದ ಪೊಲೀಸ್ ಠಾಣೆಯ ಮುಂಭಾಗದಲ್ಲಿ ಇಂದು ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ ಅಭೂತಪೂರ್ವ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಇಂದು ಭಾರತೀಯ ಜನತಾ ಪಾರ್ಟಿ ಘಟಕ. ವತಿಯಿಂದ ಪಟಾಕಿ ಸಿಡಿಸಿ ಸಿಹಿ ಹಂಚಿ ಸಡಗರ ಸಂಭ್ರಮದಿಂದ ವಿಜಯೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಭಾರತೀಯ ಜನತಾ ಪಾರ್ಟಿ ಮುದಗಲ್ ನಗರ ಘಟಕ ಅಧ್ಯಕ್ಷ ಶ್ರೀ ಕರಿಯಪ್ಪ ಯಾದವ್, ಮಲ್ಲಪ್ಪ ಮಾಟೂರ, ಸಂತೋಷ್ ಸುರುಪೂರ, ವೇಂಕಟೇಶ ಹಿರೇಮನಿ, ನಾಗರಾಜ್ ತಳವಾರ, ನಾಗರಾಜ್ ಯಾದವ್, ವೀರಪ್ಪ ಗುಡೂರ, ಪಾಷಾ ಜಂಬಳ್ಳಿ, ಚಂದಾವಲಿ ಜಂಗಲಿ, ಇನ್ನಿತರರು ಇದ್ದರು.

